ಇ) ಹಾಗಿದ್ದಲ್ಲಿ, ದುರಸ್ತಿ ಮಾಡಲು ಕೈಗೊಂಡ ಕ್ರಮಗಳೇನು?

ಶ್ರೀ ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಹುಕ್ಕೇರಿ ತಾಲ್ಲೂಕಿನಲ್ಲಿ ಒಟ್ಟು 6 ರಾಜ್ಯ ಹೆದ್ದಾರಿಗಳಿದ್ದು, ಅವುಗಳ ವಿವರ ಕೆಳಗಿನಂತಿದೆ

1) ಪಟುಬಿದರಿ– ಚಿಕ್ಕಲಗುಡ್ಡ (ರಾಹೆ–1) ರಸ್ತೆ–33 59 ಕಿಮೀ

2) ಬಿಜಾಪುರ–ಸಂಕೇಶ್ವರ (ರಾಹೆ–12) ರಸ್ತೆ–16 44 ಕಿಮೀ

3) ಮಂಗಸೂಳಿ–ಲಕ್ಷ್ಮೇಶ್ವರ ರಸ್ತೆ (ರಾಹೆ–73)–16 57 ಕಿಮೀ

4) ಶೆಟ್ಟಿಹಳ್ಳಿ–ಇಚಲಕರಂಜಿ ರಸ್ತೆ (ರಾಹೆ–78)–44 09 ಕಿಮೀ

5) ಸಂಕೇಶ್ವರ–ಸದಲಗಾ ರಸ್ತೆ (ರಾಹೆ–97)– 6 40 ಕಿಮೀ

6) ಸಂಕೇಶ್ವರ–ಸಂಗಮ (ರಾಹೆ–44) ರಸ್ತೆ–28 35 ಕಿಮೀ

ಆ) ಬಂದಿರುತ್ತದೆ

ಇ) ಈ ರಾಜ್ಯ ಹೆದ್ದಾರಿಗಳನ್ನು ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತದ ವತಿಯಿಂದ ಕೈಗೊಳ್ಳಲಾಗುತ್ತಿರುವ 2005–08 ರ ವರೆಗಿನ ಮೂರು ವರ್ಷಗಳ ರಾಜ್ಯ ಹೆದ್ದಾರಿ ನಿರ್ವಹಣೆಯ ಯೋಜನೆ ಅಡಿಯಲ್ಲಿ ರೂ 386 ಲಕ್ಷಗಳ ಅಂದಾಜು ಮೊತ್ತದಲ್ಲಿ ನಿರ್ವಹಣೆಗಾಗಿ ತೆಗೆದುಕೊಳ್ಳಲಾಗಿದೆ ಈ ಕಾಮಗಾರಿಗಳು ದಿನಾಂಕ 25 2 2006 ರಲ್ಲಿ ಪ್ರಾರಂಭಗೊಂಡಿದ್ದು ಪ್ರಗತಿಯಲ್ಲಿವೆ

ಇದಲ್ಲದೆ ಸದರಿ ರಸ್ತೆಗಳ ಕೆಲವು ಆಯ್ದ ಭಾಗಗಳನ್ನು ಪ್ರಕೃತಿ ವಿಕೋಪ ಪರಿಹಾರ ನಿಧಿ ಅಡಿ ಹಾಗೂ ಕೇಂದ್ರ ರಸ್ತೆ ನಿಧಿ (ಸಿ ಆರ್ ಎಫ್) ಅಡಿಯಲ್ಲಿ ದುರಸ್ತಿ ಮಾಡಲು ಕ್ರಮ ಕೈಗೊಳ್ಳಲಾಗಿದೆ

294 (146) ಶ್ರೀ ಅಶೋಕ ಗುರಪ್ಪ ಶಾಬಾದಿ (ಸಿಂಧಗಿ) . ಮಾನ್ಯ ಮುಖ್ಯಮಂತ್ರಿಯವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಿಂಧಗಿ ಪಟ್ಟಣದಲ್ಲಿ ಕುಡಿಯುವ ನೀರು ಸರಬರಾಜಿಗಾಗಿ ಅಳವಡಿಸಿರುವ ಪೈಪ್ ಲೈನ್ ಶಿಥಿಲಗೊಂಡಿದ್ದು (ಹಳೆಯದಾಗಿದ್ದು) ಸಮರ್ಪಕವಾಗಿ ನೀರು ಸರಬರಾಜಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಹಾಗಿದ್ದಲ್ಲಿ ಪೈಪ್ ಲೈನ್ ಬದಲಿಸಿ ಹೊಸ ಪೈಪ್ ಲೈನ್ ಅಳವಡಿಸುವಲ್ಲಿ ಸರ್ಕಾರ ಕೈಗೊಂಡಿರುವ ಕ್ರಮವೇನು?

ಶ್ರೀ ಹೆಚ್ ಡಿ ಕುಮಾರಸ್ವಾಮಿ (ಮುಖ್ಯಮಂತ್ರಿಯವರು)

ಅ) ಹೌದು

ಆ) ಸದರಿ ವಿಷಯವು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಪರಿಶೀಲನೆಯಲ್ಲಿದೆ

295 (147) ಶ್ರೀ ಅಶೋಕ ಗುರಪ್ಪ ಶಾಬಾದಿ (ಸಿಂಧಗಿ) . ಮಾನ್ಯ ಮುಖ್ಯಮಂತ್ರಿಯವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಿಂಧಗಿ ಪಟ್ಟಣದಲ್ಲಿ ಒಳಚರಂಡಿ ವ್ಯವಸ್ತೆ ಇಲ್ಲದೆ ಇರುವುದರಿಂದ ಸಾರ್ವಜನಿಕರಿಗೆ ತುಂಬಾ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಹಾಗಿದ್ದಲ್ಲಿ ಒಳಚರಂಡಿ ವ್ಯವಸ್ಥೆ ಕಲ್ಪಿಸಲು ಸರ್ಕಾರ ಉದ್ದೇಶಿಸಿದೆಯೆ,

ಇ) ಉದ್ದೇಶಿಸಿದ್ದಲ್ಲಿ, ಈ ಕಾಮಗಾರಿಗಾಗಿ ಒದಗಿಸಿರುವ ಅನುದಾನವೆಷ್ಟು,

ಈ) ಯಾವಾಗ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು?

ಶ್ರೀ ಹೆಚ್ ಡಿ ಕುಮಾರಸ್ವಾಮಿ (ಮುಖ್ಯಮಂತ್ರಿಯವರು)

ಅ) ಹೌದು

ಆ) ಹಾದು

ಇ) ಸಿಂಗಿ ಪಟ್ಟಣದಲ್ಲಿ ಸರ್ವೆ ಕಾಮಗಾರಿಯನ್ನು ಕೈಗೊಂಡು, ವಿವರವಾದ ವಿನ್ಯಾಸಗಳನ್ನು ಹಾಗೂ ಅಂದಾಜು ಪಟ್ಟಿಯನ್ನು ತಯಾರಿಸಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ

ಆದುವರಿಂದ ಕಾಮಗಾರಿಗೆ ಅನುದಾನ ನೀಡುವ ಪ್ರಶ್ನೆ ಉದ್ಭವಿಸುವುದಿಲ್ಲ

ಈ) ಮೇಲೆ ನಮೂದಿಸಿದಂತೆ